

ಹಬ್ಬ ಹರಿದಿನಗಳಲ್ಲಿ ಪುಟಾಣಿಗಳು, ಮಹಿಳೆಯರು ರೇಷ್ಮೆ ಸೀರೆ, ಲಂಗ ದಾವಣಿ ತೊಡುವುದು ಪದ್ಧತಿ. ಈ ಸಂದರ್ಭಕ್ಕಾಗಿಯೇ ಹೊಸ ವಿನ್ಯಾಸದ ಫ್ಯಾಷನಬಲ್ ಸೀರೆ, ಉಡುಗೆಗಳು ಪೇಟೆಯಲ್ಲಿ ಟ್ರೆಂಡ್ ಸೃಷ್ಟಿಸುತ್ತಿವೆ.

# ಯುಗಾದಿಗೆ ರೇಷ್ಮೆ ಸೀರೆ ಟ್ರೆಂಡ್

■ ಯು. ಅನಂತ್

ಹಬ್ಬ ಎಂದರೆ ಹೆಣ್ಣು ಮಕ್ಕಳಿಗೆ ಖುಷಿ. ವಿಭಿನ್ನ ಉಡುಗೆಗಳಿಂದ ಸಿಂಗರಿಸಿಕೊಳ್ಳುವುದರಲ್ಲೇ ಮಹಿಳೆಯರಿಗೆ ತೃಪ್ತಿ. ಯುಗಾದಿ ಹಬ್ಬದ ಖದರು ಹೆಚ್ಚಲು ರೇಷ್ಮೆ ಸೀರೆಯ ಮಿಂಚು ಬೇಕೇ ಬೇಕು. ಪುಟಾಣಿಗಳಿಗೆ ಜರಿ ಲಂಗ ದಾವಣಿ ತೊಡಿಸಿದರೆ ಮುಖದ ತುಂಬ ಕಳೆ, ಮನೆ ತುಂಬ ಹಬ್ಬದ್ದೇ ಹೊಳಪು.

ಈ ಬಾರಿಯ ಯುಗಾದಿ ಹಬ್ಬಕ್ಕಾಗಿಯೇ ಫ್ಯಾಷನ್ ವಿನ್ಯಾಸಗಾರರು ಹೊಸ ಬಗೆಯ ಉಡುಗೆಗಳನ್ನು 'ಎಥ್ನಿಕ್ ವೇರ್' ಪರಿಕಲ್ಪನೆಯಲ್ಲಿ ಮಾರುಕಟ್ಟೆಗೆ ತಂದಿದ್ದಾರೆ. ಪುಟ್ಟ ಹುಡುಗಿಯರಿಗೆ ಮಿನಿ ಲಂಗದಾವಣಿ, ರೆಡಿ ಟು ವೇರ್ ಸೀರೆ, ಅಂದದ ಉದ್ದ ಲಂಗ, ಆಕರ್ಷಕ ಲೆಹೆಂಗಾ, ರೇಷ್ಮೆ ಬಟ್ಟೆಯಲ್ಲಿಯೇ ಹೊಲಿದ ಸ್ಕರ್ಟ್, ಫ್ರಾಕ್, ಆಧುನಿಕ ಮನೋಭಾವದ ಹುಡುಗಿಯರಿಗೆ ಮಿನಿ ಗೌನ್ ಬಂದಿದ್ದು, ಹಬ್ಬದ ಸಂಭ್ರಮ ಇಮ್ಮಡಿಸಲು ಸಹಕಾರಿ.

ಹುಡುಗಿಯರಷ್ಟೇ ಹಬ್ಬದ ಸಂಭ್ರಮ ಹುಡುಗರಿಗೂ ಇದೆ. ಸಣ್ಣ ಸಣ್ಣ ಹುಡುಗರಿಗಾಗಿ ರೇಷ್ಮೆಯ ಶೆರ್ವಾನಿ, ಕುರ್ತಾ, ಪೈಜಾಮ ಅದರ ಮೇಲೊಂದು ಕೋಟ್, ಪಂಚೆ ಪ್ರಿಯರಿಗಾಗಿ ಜರಿಯಂಚಿನ ಪಂಚೆ, ರೇಷ್ಮೆ ಶರ್ಟ್ ಜೊತೆಗೊಂದು ಶಲ್ಯ ಧರಿಸಿದರೆ ಪಕ್ಕಾ ಎಥ್ನಿಕ್ ಲುಕ್ ಕೊಡುತ್ತದೆ.

ತಿಜೋರಿ ತುಂಬ ಸೀರೆಗಳಿದ್ದರೂ ರೇಷ್ಮೆ ಸೀರೆ ಎಂದರೆ ಕಣ್ಣರಳಿಸದಿರುವ ಮಹಿಳೆಯರೇ ಇಲ್ಲ. ಇವರ ಮನದಿಂಗಿತ ಅರಿತ ವರ್ತಕರೂ ರೇಷ್ಮೆಯಲ್ಲೇ ವಿವಿಧ ಬಗೆಯ ಕಾಂಜೀವರಂ, ಸೇಲಂ ಸೀರೆಗಳು, ಬನಾರಸ್, ಜಾರ್ಜೆಟ್, ಪೋಚಂಪಲ್ಲಿ, ಉಪ್ಪಾಡ, ಕೊಯಮತ್ತೂರು ಸಿಲ್ಕ್ ಸೀರೆಗಳನ್ನು ಗಾಢ, ತಿಳಿ ಬಣ್ಣಗಳಲ್ಲಿ, ಹಲವು ವಿನ್ಯಾಸದಲ್ಲಿ ಮಾರುಕಟ್ಟೆಗೆ ತಂದಿದ್ದಾರೆ. ಕೈಗೆಟಕುವ ಬೆಲೆಯಲ್ಲಿ ಸಿಗುವ ಇಂಥ ಸೀರೆಗಳು ಹಬ್ಬಕ್ಕೆ ಹೆಚ್ಚಿನ ಮೆರುಗನ್ನು ನೀಡುತ್ತವೆ.

'ಬನಾರಸ್ ಸೀರೆಯಲ್ಲಿ ದೊಡ್ಡ ಬುಟ್ಟಾ ಇರುವ ಸೀರೆಗಳು ಇಂದಿನ ಟ್ರೆಂಡ್. ಈ ಸೀರೆಗೆ ಅಗಲವಾದ ಬಾರ್ಡರ್, ಸೆರಗಿನಲ್ಲಿ ಆಕರ್ಷಕ ವಿನ್ಯಾಸವಿದ್ದರೆ ಮಹಿಳೆಯರಿಗೆ ಎಂದಿಗೂ ಇಷ್ಟವಾಗುತ್ತದೆ. ಈ ರೀತಿಯ ಸೀರೆಗಳಿಗೆ ಬೇಡಿಕೆಯೂ ಹೆಚ್ಚು. ಮಹಿಳೆಯರು ಮುಗಿ ಬೀಳುವುದೇ ಇಂಥ ಟ್ರೆಂಡಿ ಸೀರೆಗಳಿಗೆ' ಎಂದು ಹೇಳುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ರೇಷ್ಮೆ ಸೀರೆ ಮಳಿಗೆಯ ವರ್ತಕ ಸುಭಾಷ್ ಲಾಲ್.

'ಸಣ್ಣ ಹುಡುಗಿಯರೂ ಈಗೀಗ ಸೀರೆ ಉಡುವ ಬಯಕೆ ವ್ಯಕ್ತಪಡಿಸುತ್ತಿದ್ದಾರೆ. ಇಂಥ ಹೆಣ್ಣು ಮಕ್ಕಳಿಗಂತೂ ರೆಡಿಮೇಡ್ ರೇಷ್ಮೆ ಸೀರೆ ಹೇಳಿ ಮಾಡಿಸಿದಂತಿದೆ. ಸಣ್ಣ ಸೈಜಿನ ಸಾಂಪ್ರದಾಯಿಕ ಉಡುಗೆಗಳು ಫ್ಯಾಷನ್ ಜಗತ್ತಿಗೆ ದಾಳಿ ಇಟ್ಟು ಕೆಲವೇ ದಿನಗಳಲ್ಲಿ ಟ್ರೆಂಡ್ ಆಗಿಬಿಟ್ಟಿವೆ. ಸೆಲೆಬ್ರಿಟಿಗಳು, ಸಿನಿಮಾ ತಾರೆಯರು, ಮಾಡೆಲಿಂಗ್ ಮಾಡುವವರೂ ರೆಡಿಮೇಡ್ ಎಥ್ನಿಕ್ ಸೀರೆಗಳಿಗೇ ಮೊರೆಹೋಗುತ್ತಿದ್ದಾರೆ' ಎನ್ನುತ್ತಾರೆ ಅವರು.

ಈಗ ಸೀರೆಗಳನ್ನು ನೆರಿಗೆ ತೆಗೆದು ನೀಟಾಗಿ ಉಡಲು ಬರದೇ ಇರುವವರೂ ಕೂಡ ಆರಾಮವಾಗಿ ಸೀರೆ ಉಡಬಹುದು. ಇಂತಹವರಿಗಾಗಿಯೇ 'ರೆಡಿ ಟು ವೇರ್' ಸೀರೆಗಳು ಬಂದಿವೆ. ಹಬ್ಬದ ಸಂದರ್ಭದಲ್ಲಿ ತರಾತುರಿಯಲ್ಲಿ ಹೊರಗೆ ಹೋಗಬೇಕಾದ ಯುವತಿಯರು ಇಂಥ ರೆಡಿಮೇಡ್ ಸೀರೆಗಳನ್ನು ಧರಿಸಿಕೊಳ್ಳಬಹುದು. ಇದಕ್ಕೆ ಮ್ಯಾಚ್ ಆಗುವಂತಹ ಒಡವೆಗಳನ್ನು ಧರಿಸಿದರೆ ಶೃಂಗಾರ ಮುಗಿದ ಹಾಗೆಯೇ.

ಬನಾರಸ್ ಸೀರೆಗಳ ಟ್ರೆಂಡ್ ಮತ್ತೆ ಮಹಿಳೆಯರ ಮನಗೆಲ್ಲುತ್ತಿದೆ. ಯುಗಾದಿಯ ಸಂಗ್ರಹದಲ್ಲಿ ಬನಾರಸ್‌ನ ವೈವಿಧ್ಯಮಯ ಸೀರೆಗಳು ಎಲ್ಲ ಮಳಿಗೆಗಳಲ್ಲಿದ್ದು ಬಣ್ಣ, ವಿನ್ಯಾಸದಿಂದಾಗಿ ಮಹಿಳೆಯರು ಮುಗಿಬೀಳುವಂತಾಗಿದೆ.

ಎಥ್ನಿಕ್ ಉಡುಪುಗಳು ಸಂಪ್ರದಾಯದ ಮಿತಿಯೊಳಗೆ ಇರುವುದಲ್ಲದೆ ಫ್ಯಾಷನ್‌ನ ಪರಿಧಿಯನ್ನೂ ಮುಟ್ಟುವ ಗುಣ ಹೊಂದಿರುವುದರಿಂದ ಈ ಬಗೆಯ ಉಡುಗೆ